ಆ) ಸಂಘದಿಂದ ಬಳಕೆದಾರರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಗ್ರಾಹಕರಿಗೆ ಅನ್ಯಾಯಗಳಾಗದಂತೆ ನಿಗಧಿತ ದರ ಪಟ್ಟಿಗಳನ್ನು ಮಾರಾಟ ಮಳಿಗೆಗಳ ಎದುರು ಪ್ರತಿ ದಿನ ಇಡಲಾಗುತ್ತಿದೆ.
2. ಮಾರಾಟಗಾರರ ಮೇಲೆ (ಸಿಬ್ಬಂದಿ ಮೇಲೆ) ದೂರುಗಳು ಬಂದಲ್ಲಿ ತಕ್ಷಣ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ.
3. ನಿಖರವಾದ ತೂಕದಲ್ಲಿ ಹಣ್ಣು ತರಕಾರಿಗಳನ್ನು ಗ್ರಾಹಕರಿಗೆ ನೀಡಲು ಪಾರದರ್ಶಿಕ ತೂಕದ ತಕ್ಕಡಿಗಳನ್ನು ಅಳವಡಿಸಲಾಗಿದೆ.
4. ಬಳಕೆದಾರರ ಹಾಗೂ ಮಳಿಗೆಯಲ್ಲಿನ ನ್ಯೂನತೆಗಳ ಪರಿಶೀಲನೆಗಾಗಿ ಮಳಿಗೆ ತಪಾಸಣೆಗಾರರನ್ನು ನೇಮಿಸಲಾಗಿದೆ.
5. ಕೆಲವು ಶಾಖೆಗಳಲ್ಲಿ ಮಾರಾಟಗಾರರಿಗೆ ಹಣ್ಣು ತರಕಾರಿ ಮಾರಾಟದ ಬಗ್ಗೆ ತರಬೇತಿ ನೀಡಲಾಗಿರುತ್ತದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಮಾಮನಿ ಚಂದ್ರಶೇಖರ ಮಲ್ಲಿಕಾರ್ಜುನ (ಉಪಾಧ್ಯಕ್ಷರು ಹಾಗೂ ಅಧ್ಯಕ್ಷರು, ಸದಸ್ಯರುಗಳ ಖಾಸಗಿ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ) ರವರ ಪರವಾಗಿ ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೆ, ಸದಸ್ಯರುಗಳ ಖಾಸಗಿ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಎರಡನೇ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಶ್ರೀ ಕೆ. ಎಸ್. ಬೀಳಗಿ (ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ) : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯು ಮೈಸೂರು ತಾಲ್ಲೂಕು ಜಯಪುರ ಹೋಬಳಿ ಉದ್ಬೂರು ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ನಡೆಸಿತೆನ್ನಲಾದ ದೌರ್ಜನ್ಯ, ಹಲ್ಲೆ, ಹಾಗೂ ಮನೆಗಳಿಗೆ ಹಾನಿ ಮಾಡಿ ಗೃಹ ಬಳಕೆಯ ವಸ್ತುಗಳನ್ನು ನಾಶಪಡಿಸಿರುವ ಬಗ್ಗೆ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನೊಪ್ಪಿಸಲಾಯಿತು.

ಅಧ್ಯಕ್ಷರು : ಮಾನ್ಯ ಶಿವಾನಂದ ನಾಯಕ್ ರವರೇ, ತಾವು ಎದ್ದು ನಿಂತಿದ್ದೀರಿ, ಏನು ವಿಚಾರ ಹೇಳಲು ಬಯಸುತ್ತೀರಿ?

ಶ್ರೀ ಶಿವಾನಂದ ನಾಯಕ್ : ಮಾನ್ಯ ಅಧ್ಯಕ್ಷರೆ, ಇವತ್ತು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಮೊನ್ನೆಯ ದಿವಸ ತಮ್ಮಲ್ಲಿ ಅನುಮತಿ ಕೇಳಿದ್ದೆವು.